ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 21/1/21

# ಕಾಂಗ್ರೆಸ್ ರಣಕಹಳೆ

## ದೆಹಲಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ

## ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಗುಡುಗಿದ ಕೈ ನಾಯಕರು

ಬೆಂಗಳೂರು: ಕೇಂದ್ರ ಸರ್ಕಾರದ 3 ಕೃಷಿ ಕಾಯಿದೆಗಳ ರದ್ದತಿಗೆ ಆಗ್ರಹಿಸಿ ರಾಜ್ಯ ಕಾಂಗ್ರೆಸ್ ಬುಧವಾರ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಿ 'ರಾಜಭವನ ಮುತ್ತಿಗೆ' ಯತ್ನ ನಡೆಸಿತು.

ಮೂರು ಕೃಷಿ ಕಾಯಿದೆಗಳು ಕಾರ್ಪೊರೆಟ್ ಕಂಪನಿಗಳ ಹಿತಾಸಕ್ತಿ ಕಾಯುತ್ತವೆ ಎಂದು ನೇರವಾಗಿ ಆರೋಪಿಸಿದ ಕಾಂಗ್ರೆಸ್ ನಾಯಕರು, ಕಾಯಿದೆಗಳನ್ನು ರದ್ದು ಮಾಡದಿದ್ದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಜನರೇ ಕಿತ್ತೊಗೆಯುತ್ತಾರೆ. ರೈತರು ದಂಗೆ ಏಳುತ್ತಾರೆ. ರೈತರ, ಕಾರ್ಮಿಕರ 'ಧ್ವನಿ'ಯಾಗಿ ಕಾಂಗ್ರೆಸ್ ಹೋರಾಟ ಮುಂದುವರಿಸಲಿದೆ ಎಂದು ಎಚ್ಚರಿಕೆ ನೀಡಿದರು.

ಸಂಗೊಳ್ಳಿರಾಯಣ್ಣ ರೈಲ್ವೇ ನಿಲ್ದಾಣದಿಂದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ವರೆಗೆ ನಡೆದ ರ‍್ಯಾಲಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ರ‍್ಯಾಲಿಯಲ್ಲಿ ನಾಯಕರಾದಿಯಾಗಿ ಪ್ರತಿಯೊಬ್ಬರು ಹೆಗಲಲ್ಲೂ ಹಸಿರು ಟವೆಲ್ ಧರಿಸಿ ರೈತಪರ ಘೋಷಣೆಗಳನ್ನು ಕೂಗಿದರು. ರ‍್ಯಾಲಿಯುದ್ದಕ್ಕೂ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಮೊಳಗಿಸಿದರು.

ಫ್ರೀಡಂ ಪಾರ್ಕ್‌ನಿಂದ ' ರಾಜಭವನ ಮುತ್ತಿಗೆ' ಹಾಕಲು ಹೊರಟ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಸೇರಿ ಹಲವು ನಾಯಕರನ್ನು ಮಾರ್ಗ ಮಧ್ಯೆಯೇ ಪೊಲೀಸರು ತಡೆದು ವಶಕ್ಕೆ ಪಡೆದುಕೊಂಡರು. ಮತ್ತೊಂದೆಡೆ ರಾಜಭವನದ ಮುಂದೆ ಪ್ರತಿಭಟನೆಗೆ ಮುಂದಾದ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಈಶ್ವರ ಖಂಡ್ರೆ, ರಾಮಲಿಂಗಾರೆಡ್ಡಿ ಸೇರಿ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ಅಂತಿಮವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪರಮೇಶ್ವರ ನೇತೃತ್ವದ ನಿಯೋಗ ರಾಜ್ಯಪಾಲರ ಭೇಟಿ ಮಾಡಿ ಕೃಷಿ ಕಾಯಿದೆಗಳನ್ನು ರದ್ದುಗೊಳಿಸುವಂತೆ ಮನವಿಯನ್ನು ಸಲ್ಲಿಸಿತು.

**ಕಾಂಗ್ರೆಸ್ ಸ್ನೇಹಿತರು ಆಗೊಮ್ಮೆ ಈಗೊಮ್ಮೆ ಎಚ್ಚರವಾಗಿ ಎದ್ದುನಿಂತು ಪ್ರತಿಭಟನೆ ಮಾಡಿ ನಾವು ಬದುಕಿದ್ದೇವೆ ಎಂದು ತೋರಿಸುತ್ತಾರೆ. ನಾನು ಬೇಡ ಎನ್ನಲು ಸಾಧ್ಯವೇ?**

**• ಬಿ.ಎಸ್.ಯಡಿಯೂರಪ್ಪ ಸಿಎಂ**



ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು.

## ನಾಯಕರ ವಾಗ್ದಾಳಿ: ಯಾರು ಏನೆಂದರು?

**■ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ**

ಕೇಂದ್ರ ಸರ್ಕಾರ ಮೂರು ಕರಾಳ ಶಾಸನಗಳನ್ನು ಜಾರಿಗೆ ತಂದಿದ್ದು ಅದರ ವಿರುದ್ಧ ರೈತರ ಧ್ವನಿ, ರಾಷ್ಟ್ರದ ಧ್ವನಿಯಾಗಿ ಕಾಂಗ್ರೆಸ್ ಹೋರಾಟ ಮಾಡಲಿದೆ. ದೆಹಲಿಯ ಪ್ರತಿಭಟನೆಯಲ್ಲಿ ಮಡಿದ ರೈತರ ಆತ್ಮಕ್ಕೆ ಶಕ್ತಿ ಕೊಡಲು ಹೋರಾಟ ಆರಂಭಿಸಿದ್ದೇವೆ. ಈ ಹೋರಾಟ ಬರೀ ಬೆಂಗಳೂರಿನಲ್ಲಿ ಮಾತ್ರವಲ್ಲ. ಮುಂದಿನ ದಿವಗಳಲ್ಲಿ ಪ್ರತಿ ತಾಲೂಕಿನಲ್ಲಿ ಕಾಂಗ್ರೆಸ್ ರೈತರ ಪರ ಹೋರಾಟ ನಡೆಸಲಿದೆ.

**■ ಸಿದ್ದರಾಮಯ್ಯ, ಪ್ರತಿಪಕ್ಷದ ನಾಯಕ**

ಕೇಂದ್ರಸರ್ಕಾರ ಅಂಬಾನಿ, ಅದಾನಿಗಳ ಗುಲಾಮರಾಗಿ ಕೃಷಿ ವಿರೋಧಿ ಕಾಯಿದೆಗಳನ್ನು ತರುತ್ತಿದೆ. ಕೃಷಿ ತಿದ್ದುಪಡಿ ಕಾಯಿದೆಗಳಿಂದ ಎಂಎಸ್‌ಪಿ ರದ್ದಾಗುತ್ತದೆ. ಇದರಿಂದ ರೈತರು ತೊಂದರೆಗೆ ಒಳಗಾಗುತ್ತಾರೆ. ಕಾಯ್ದೆಗಳು ಅಸಾಂವಿಧಾನಿಕವಾಗಿವೆ. ರೈತರ ಪ್ರತಿಭಟನೆ ನ್ಯಾಯಸಮ್ಮತವಾಗಿದೆ. ಹೀಗಾಗಿಯೇ ಸುಪ್ರೀಂ ಕೋರ್ಟ್ ಕಾಯಿದೆಗಳಿಗೆ ತಡೆಯಾಜ್ಞೆ ನೀಡಿದೆ. ಸುಪ್ರೀಂ ನೇಮಿಸಿರುವ ಸಮಿತಿಯನ್ನು ರೈತರು ಒಪ್ಪಿಲ್ಲ. ಹೀಗಾಗಿ ಕೇಂದ್ರ ಸರ್ಕಾರಕ್ಕೆ ಇರುವ ಏಕೈಕ ದಾರಿ ಕಾಯಿದೆಗಳನ್ನು ಹಿಂಪಡೆಯುವುದು.

## ಹೋರಾಟದ ವರ್ಷವಾಗಿ ಪರಿಗಣನೆ!

'ಹಸಿರು ಟವೆಲ್' ಧರಿಸಿ ಹೋರಾಟಕ್ಕಿಳಿದಿದ್ದ ಕಾಂಗ್ರೆಸ್ ಪ್ರತಿಭಟನಾ ರ‍್ಯಾಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನವೂ ಆಗಿತ್ತು.ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧದ ನಿರಂತರ ಹೋರಾಟ ಮಾಡುವ ಕುರಿತು ಸಂಕಲ್ಪ ತೆಗೆದುಕೊಂಡಿತು.ರ‍್ಯಾಲಿಯಲ್ಲಿ ಕಾಂಗ್ರೆಸ್‌ನ ಬಹುತೇಕ ನಾಯಕರು, ಸಂಸದರು, ಶಾಸಕರು ಪಾಲ್ಗೊಂಡಿದ್ದರು. ಈ ವರ್ಷವನ್ನು ಹೋರಾಟದ ವರ್ಷ ಎಂದು ಪರಿಗಣಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಇದನ್ನು ಅನುಮೋದಿಸಿದಂತೆ ಸಿದ್ದರಾಮಯ್ಯ ಕೂಡ, ಬರೀ ಇದೊಂದು ವರ್ಷ ಮಾತ್ರವಲ್ಲ ಮುಂದಿನ ಚುನಾವಣೆ ತನಕ ಕಾಂಗ್ರೆಸ್‌ಗೆ ಹೋರಾಟ ಹಾಗೂ ಸಂಘರ್ಷದ ಹಾದಿ ಎಂದು ಪರಿಗಣಿಸಿ ಹೋರಾಟಬೇಕಿದೆ ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು.